ಕರ್ನಾಟಕ ಸರ್ಕಾರ

**ಸಾಕ್ಷಿದಾರರ ಹೇಳಿಕೆ (ಆರ್.ಪಿ.ನಂ. 57) ಫಾರ್ಮ್ ನಂ. 4 (ಸಿವಿಲ್)**

**ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ ರವರ ನ್ಯಾಯಾಲಯ, ದಾಂಡೇಲಿ**

ಕ್ರಿಮಿನಲ್ ಕೇಸ ನಂ : 182-2010

**ಚಾ.ಸಾ. : ೬ ಪ್ರಾ.ಸಾ. : ೨**

| | | |
|---|---|---|
| ಸಾಕ್ಷಿಯ ಹೆಸರು | : | ಸಿಕಂದರ್ ಬಾಷಾ |
| ತಂದೆಯ:ಗಂಡನ ಹೆಸರು | : | ಮೌಲಾನ ಶೇಖ್ |
| ವಯಸ್ಸು | : | **31 ವರ್ಷ** |
| ಉದ್ಯೋಗ | : | ಮೈಕ್ಯಾನಿಕ್ |
| ವಾಸ | : | ದಿಂಡಿಗಲ್ |

ಸಾಕ್ಷಿಗೆ ಪ್ರಮಾಣೀಕರಿಸಲಾಯಿತು. 15-09-2015

ಮುಖ್ಯ ವಿಚಾರಣೆ : ಎಪಿಪಿ ಯವರಿಂದ

**(** ಸಾಕ್ಷಿಗೆ ತಮಿಳು ಭಾಷೆ ಮಾತ್ರ ಬರುವುದರಿಂದ ಕನ್ನಡ ಭಾಷೆಯಲ್ಲಿ ಕೇಳುವ ಪ್ರಶ್ನೆಯನ್ನು ಸಾಕ್ಷಿಗೆ ತಮಿಳು ಭಾಷೆಗೆ ಭಾಷಾಂತರಿಸಿ ಸಾಕ್ಷಿ ನೀಡಿದ ಉತ್ತರವನ್ನು ಕನ್ನಡ ಭಾಷೆಗೆ ಭಾಷಾಂತರಿಸಲು ಶ್ರೀ ಬಿ.ಬಿ.ಕಾಳೆ ಎಂಬ ಪೋಲಿಸ ಮುಖ್ಯ ಪೇದೆಯನ್ನು ಭಾಷಾಂತಕಾರರನ್ನಾಗಿ ನೇಮಿಸಲಾಯಿತು. ಭಾಷಾಂತರಕಾರರಿಗೂ ಸಹ ಪ್ರಮಾಣ ವಚನ ಬೋದಿಸಲಾಯಿತು.**)**

೨೦೧೦ ನೇ ಸಾಲಿನಲ್ಲಿ ನಾನು ರಾಮನಗರದಲ್ಲಿ ವಾಸ ಇದ್ದೆನು. ನಾನು ಈಗ ಒಂದು ದಾಖಲೆಯನ್ನು ನೋಡುತ್ತಿದ್ದು ಅದರಲ್ಲಿರುವ ನನ್ನ ಸಹಿಯನ್ನು ನೋಡಿ ಗುರುತಿಸುತ್ತಿದ್ದೇನೆ. ಸಾಕ್ಷಿಗೆ ತೋರಿಸಲಾದ ದಾಖಲೆ ಪಂಚನಾಮೆಯಾಗಿದ್ದು ಅದನ್ನು ನಿಪಿ ೫ ಹಾಗೂ ಅದರಲ್ಲಿ ಸಾಕ್ಷಿ ಗುರುತಿಸಿದ ಸಹಿಯನ್ನು ನಿಪಿ ೫ ಎ ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ೩೦-೦೧-೨೦೧೦ ರಂದು ರಾಮನಗರ ಪೋಲಿಸ ಠಾಣೆಯಲ್ಲಿ ಮಾಡಿದ್ದೇನೆ. ಟಿಪ್ಪರ್ ಲಾರಿಯನ್ನು ಅದರ ಮಾಲಿಕರಾದ

ಸುಬ್ಬರಾವ್ ಎಂಬವರಿಗೆ ಬಿಟ್ಟು ಕೊಡುವಾಗ ಸದರಿ ಸಹಿಯನ್ನು ಮಾಡಿದ್ದೇನೆ. ಸದರಿ ಲಾರಿಯ ಸಂಖ್ಯೆ ನನಗೆ ನೆನಪಿಲ್ಲ. ಆ ಲಾರಿಯನ್ನು ನೋಡಿದರೆ ಗುರುತಿಸಬಲ್ಲೆ.

**(ಸದರಿ ಲಾರಿಯ ಪೋಟೋವನ್ನು ನ್ಯಾಯಾಲಯದ ಆದೇಶದಂತೆ ತನಿಖಾಧಿಕಾರಿಯವರು ಹಾಜರು ಪಡಿಸದ ಕಾರಣ ಮುಂದುವರಿದ ಮುಖ್ಯ ವಿಚಾರಣೆಗೆ ಎಪಿಪಿಯವರು ಕಾಲಾವಕಾಶ ಕೇಳಿದ್ದು ಕೋರಿಕೆಯ ಮೇರೆಗೆ ಮಂದೂಡಲಾಯಿತು.)**

**(ತೆರೆದ ನ್ಯಾಯಾಲಯದಲ್ಲಿ ಗಣಕೀಕೃತಗೊಳಿಸಲಾಯಿತು)**

ಓ ಹೇ ಕೇ ಸರಿ ಇದೆ

ಪ್ರದನ್ಯಾದಂ ದಾಂಡೇಲಿ

ದಿನಾಂಕಃ೧೫-೦೯-೨೦೧೫ ರಂದು ಸಾಕ್ಷಿಗೆ ಪ್ರಮಾಣಿಕರಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆ ಃ ಎಪಿಪಿಯವರಿಂದ ಃ

ಸದರಿ ಲಾರಿಯನ್ನು ನಾನು ಪೋಟೋ ಮೂಲಕ ನೋಡಿ ಗುರುತಿಸುತ್ತಿದ್ದೇನೆ. ಅದನ್ನು ನಿಪಿ ೬ ಹಾಗೂ ಸಿಡಿಯನ್ನು ನಿಪಿ ೭ ಎಂದು ಗುರುತಿಸಿದ್ದೇನೆ. ಸದರಿ ಪೋಟೋದಲ್ಲಿ ನಾನು ಕಾಣಿಸುತ್ತಿದ್ದೇನೆ. ನಾನು ರಾಮನಗರದ ವರಾರ ಕನಸ್ಟ್ರಕ್ಷನ್ಸನಲ್ಲಿ ಲಾರಿ ಚಾಲಕನಾಗಿ ಕೆಲಸ ಮಾಡಿದ್ದೇನೆ. ಕನಸ್ಟ್ರಕ್ಷನ್ಸ ಕೆಲಸಕ್ಕೆ ತಮಿಳುನಾಡಿನಿಂದ ೫ ಲಾರಿಗಳು ಬಂದಿದ್ದವು. ಅಲ್ಲಿ ಕಳ್ಳತನವಾದ ವಿಚಾರ ನನಗೆ ತಿಳಿದಿರುತ್ತದೆ. ೨೦೦೯ ರ ಡಿಸೆಂಬರ್ ತಿಂಗಳಿನಲ್ಲಿ ಆ ರೀತಿ ಕಳ್ಳತನವಾಗಿದ್ದು ದಿನಾಂಕ ನನಗೆ ಗೊತ್ತಿಲ್ಲ. ಪ್ಲಾಂಟ್‌ನಲ್ಲಿ ನಿಲ್ಲಿಸಿದ್ದ ಲಾರಿಯನ್ನು ಕಳ್ಳತನ ಮಾಡಲಾಗಿತ್ತು. ಸದರಿ ಲಾರಿ ಸಿಕ್ಕಿರುವ ಬಗ್ಗೆ ನನಗೆ ಮಾಹಿತಿ ಸಿಕ್ಕಿದ್ದು ಅದನ್ನು ಠಾಣೆಯಿಂದ ಬಿಡಿಸಿಕೊಂಡು ಹೋಗಿರುತ್ತಾರೆ. ಆ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆಯನ್ನು ನೀಡಿದ್ದೇನೆ.

ಪಾಟೀ ಸವಾಲು ಃ ಆರೋಪಿ ಪರ ವಕೀಲರಿಂದ ಃ

ನನಗೆ ೨ ವರ್ಷಗಳಿಂದ ಸುಬ್ಬಾರಾವ್ ಎಂಬವರ ಪರಿಚಯ ಇದೆ. ನಿಪಿ ೫ ರಲ್ಲಿ ಏನು ಬರೆದಿದೆ ಎಂದು ಗುತ್ತಾ ಎಂದರೆ ಸಾಕ್ಷಿ ನುಡಿಯುತ್ತಾರೆ ನನಗೆ ಹೇಳಿದ್ದಾರೆ. ನಾನು ಸುಬ್ಬರಾವ್ ಎಂಬವರ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಸಹಿ ಮಾಡಿದ ದಿನಾಂಕದಂದು ಪೋಲಿಸರಿಗೆ ಹೇಳಿಕೆಯನ್ನು ನೀಡಿದ್ದೇನೆ. ಆದರೆ ದಿನಾಂಕ ನನಗೆ ನೆನಪಿಲ್ಲ. ನಾನು ಒಂದು ಬಾರಿ ಪೋಲಿಸರಿಗೆ ಹೇಳಿಕೆಯನ್ನು ನೀಡಿದ್ದೇನೆ. ಪ್ಲಾಂಟ್‌ನ ಸರ್ವೇ ನಂಬರ ನನಗೆ ಗೊತ್ತಿಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ ಟಿಪ್ಪರ್ ಲಾರಿಗಳ ಸಂಖ್ಯೆ ನನಗೆ ಹೇಳಲಾಗುವುದಿಲ್ಲ. ಸದರಿ ಪ್ಲಾಂಟ್ ಮುಖ್ಯ ರಸ್ತೆಯಿಂದ ಸುಮಾರು ೧೦೦ ಅಡಿ ದೂರದಲ್ಲಿದೆ. ಸದರಿ ಪ್ಲಾಂಟ್‌ನ ಸುತ್ತ ಜಂಗಲ್

ಇದೆ. ನನಗೆ ಯಾವುದೇ ವಿಚಾರ ಗೊತ್ತಿಲ್ಲದೆ ಇದ್ದರೂ ಮಾಲಕರ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ಗಣಕೀಕೃತಗೊಳಿಸಲಾಯಿತು)**

ಓ ಹೇ ಕೇ ಸರಿ ಇದೆ

ಪ್ರದನ್ಯಾದಂ ದಾಂಡೇಲಿ